ಕಥೆ

# ಕತ್ತಾಳೆ





**ಡಾ. ನಾಗರಾಜು ಜಿ.ಬಿ. ಭೈರೇನಹಳ್ಳಿ**

ಕಲೆ: ಎ.ಎಸ್‌. ವಿಶ್ವನಾಥ್

ಹದ್ದು ಆಗಸದಲ್ಲಿ ಹಾರುತ್ತಿದ್ದರೂ, ಕೆಳಗೆ ರಂಗಮ್ಮನ ಮನೆಯ ಮುಂದೆ ಕಸ ಕೆರೆದು ಕಾಳು ಕಡಿ ಹೆಕ್ಕುತ್ತಿದ್ದ ಕೋಳಿಗಳ ಮೇಲೆ ತನ್ನ ದೃಷ್ಟಿ ನೆಟ್ಟಿತ್ತು. ತಾಯಿಯ ನಜರಿನಿಂದ ಮರೆಯಾಗಿ ಒಂಟಿಯಾಗಿ ಸಿಗುವ ಕೋಳಿಮರಿಗಳನ್ನು ಎದುರುನೋಡುತ್ತಾ, ರಂಗಮ್ಮನ ಮನೆಯನ್ನೇ ಕೇಂದ್ರವಾಗಿಸಿಕೊಂಡು ಮೇಲೆ ಸುತ್ತುತ್ತಿತ್ತು. ತಾಯಿಕೋಳಿ ಕತ್ತನ್ನು ಆ ಕಡೆ ಈ ಕಡೆ ಆಡಿಸುತ್ತಾ, ಕಣ್ಣಳತೆಯಲ್ಲಿ ತನ್ನ ಎಲ್ಲಾ ಮರಿಗಳು ಇವೆಯೋ ಇಲ್ಲವೋ ಗಮನಿಸುತ್ತಾ, ಮೇಲೆ ದೂರದಲ್ಲಿ ಹಾರುತ್ತಿದ್ದ ಹದ್ದಿನ ಮೇಲೂ ಒಂದು ಕಣ್ಣು ನೆಟ್ಟು, ಯಾವುದೇ ಕ್ಷಣದಲ್ಲಿ ಧುತ್ತನೆ ಎರಗಬಹುದಾದ ಶತ್ರುವಿನ ದಾಳಿಯಿಂದ ಮರಿಗಳ ರಕ್ಷಣೆ ಮಾಡಲು ತನ್ನ ಸಕಲ ಇಂದ್ರಿಯಗಳನ್ನೆಲ್ಲಾ ಸನ್ನದ್ಧ ಸ್ಥಿತಿಯಲ್ಲಿಟ್ಟುಕೊಂಡು, ಕಾಲಿನಿಂದ ಕಸ ಕೆದರುತ್ತಾ, ಆಹಾರ ಹುಡುಕುವುದನ್ನು ಮರಿಗಳಿಗೆ ತೋರಿಸುತ್ತಿತ್ತು. ಒಲೆಯ ಮೇಲೆ ಮುದ್ದೆಗೆ ಕುದಿಯಲು ನೀರಿಟ್ಟು, ಬಾಗಿಲ ಹತ್ತಿರ ಬಂದು ನಿಂತ ರಂಗಮ್ಮ ಹಾಗೆಯೇ ಮನೆಯ ಮುಂದೆ ಕಣ್ಣುಹಾಯಿಸಿದಾಗ, ಬಚ್ಚಲು ನೀರು ಹಾದುಹೋಗುವ ತಾವಿನ ಪಕ್ಕದಲ್ಲಿಯೇ ಕಾಲಿನಿಂದ ಕೆಸರು ಕೆದರುತ್ತಿದ್ದ ಕೋಳಿ ಕಣ್ಣಿಗೆ ಬಿತ್ತು. ಇದ್ದ ಎಂಟರಲ್ಲಿ ಮೂರು ಮರಿಗಳು ಈಗಾಗಲೇ ಹದ್ದಿನ ಪಾಲಾಗಿದ್ದವು. ಕಳೆದ ವಾರವಷ್ಟೇ ತನ್ನ ಕಣ್ಣೆದುರೇ, ತಾನು ಕಿರುಚಿದರೂ ಬಿಡದೆ ಕೋಳಿಮರಿಯನ್ನು ಹದ್ದು ಹೊತ್ತೊಯ್ದಿತ್ತು. ಅಂದಿನಿಂದ ಕೋಳಿಗಳನ್ನು ಹೊರಗೆ ಬಿಡದೆ, ಗೂಡಿನಲ್ಲಿ ಕೂಡಾಕಿ, ಅಲ್ಲಿಯೇ ಅಕ್ಕಿ ಹೊಟ್ಟು, ನುಚ್ಚು ಹಾಕಿದ್ದಳು. ಆದರೆ ಎಷ್ಟು ದಿನ ಹದ್ದಿಗೆ ಹೆದರಿ ಕೋಳಿಯನ್ನು ಒಳಗೆ ಕೂಡಿಹಾಕುವುದು? ಮನೆಯ ಒಳಗೆ ಏನೇ ಹಾಕಿ ಸಾಕಿದರೂ ಸಹ ಅವು ಸ್ವತಂತ್ರವಾಗಿ ಹೊರಗೆ ಬೀದಿಗಳಲ್ಲಿ ತಿಂದು ಬೆಳೆದಷ್ಟು ದಷ್ಟಪುಷ್ಟವಾಗಿ ಬೆಳೆಯಲಾರವು ಎಂದು ರಂಗಮ್ಮ ಕೋಳಿಗಳನ್ನು ಮತ್ತೆ ಹೊರಗೆ ಬಿಟ್ಟಿದ್ದಳು. ಯಾವುದಕ್ಕೂ ಇರಲಿ ಎಂದು ಸೌದೆಯ ತುಂಡೊಂದನ್ನು ಕೈಗೆ ಸಿಗುವಂತೆ ಬಾಗಿಲ ಹಿಂದೆಯೇ ಇಟ್ಟಿದ್ದಳು. ಈ ಸಾರಿ ಹದ್ದು ಏನಾದರೂ ತನ್ನ ಕೋಳಿಗಳ ತಂಟೆಗೆ ಬಂದರೆ